ವಾರದ ಪತ್ರ

## ದೇಶದ ಕಣ್ಮಣಿಗಳು

ಝೀ ಕನ್ನಡದಲ್ಲಿ ಶನಿವಾರ ಮತ್ತು ಭಾನುವಾರ ಬರುವ 'ಕನ್ನಡದ ಕಣ್ಮಣಿಗಳು' ಕಾರ್ಯಕ್ರಮ ತುಂಬಾ ಅಪರೂಪದ ಮತ್ತು ಒಳ್ಳೆಯ ಕಾರ್ಯಕ್ರಮ. ಈ ಪುಟಾಣಿಗಳು ಕೇವಲ ಕನ್ನಡದ ಕಣ್ಮಣಿಗಳಲ್ಲ, ಭಾರತದ ಕಣ್ಮಣಿಗಳು. ಇವರು ಕನ್ನಡ ಶಾಲೆಯ ಬಗ್ಗೆ, ಮೀಸಲಾತಿಯ ಬಗ್ಗೆ, ಮೀನುಗಾರರ ಕುರಿತು ಹೇಳಿದ ಮಾತುಗಳು ತುಂಬಾ ಸತ್ಯದ ಹಾಗೂ ಸತ್ವದ ಮಾತುಗಳು. ರೈತನ ಕುರಿತು ಹೇಳಿದ ಮಾತುಗಳಂತೂ ಎಲ್ಲರ ಹೃದಯವನ್ನು ತಟ್ಟುತ್ತದೆ. ನಾನು ಓದಿ ರೈತನೇ ಆಗುತ್ತೇನೆ ಎಂಬ ಮಾತು ಕೇವಲ ರೈತನ ಮಗ ಮಾತ್ರ ಹೇಳಿದರೆ ಸಾಲದು ಉದ್ಯೋಗ ಸೃಷ್ಟಿ ಮಾಡುತ್ತೇವೆಂದು ಹೇಳುವ ನಾಯಕರು ನಿರುದ್ಯೋಗ ವಿದ್ಯಾವಂತರು ಕೃಷಿ ಕ್ಷೇತ್ರದಲ್ಲಿ ಕೆಲಸವನ್ನು ಮಾಡುವಂತೆ ಪ್ರೋತ್ಸಾಹಿಸುವುದು ಅಗತ್ಯವಾದುದು. ದೇಶ ಎಷ್ಟೇ ಅಭಿವೃದ್ಧಿಯನ್ನು ಸಾಧಿಸಿದರೂ ಹೊಟ್ಟೆಗೆ ಅನ್ನವಿಲ್ಲದೆ ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಪ್ರತಿಯೊಬ್ಬ ವ್ಯಕ್ತಿಯೂ ಅರಿತಿರಬೇಕು.

—ಕಲ್ಪನಾ ಪ್ರಭಾಕರ ಸೋಮನಳ್ಳಿ

## ಸ್ಪರ್ಧಿಗಳೂ ಸಮರ್ಥರಿರಲಿ

ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಥಟ್ ಅಂತ ಹೇಳಿ' ಕಾರ್ಯಕ್ರಮ ಇತ್ತೀಚೆಗೆ ಬಹಳ ಸಪ್ಪೆ. ಈಗ ಬರುತ್ತಿರುವ ಅಭ್ಯರ್ಥಿಗಳು ಅವರಿಗೆ ಯಾವುದೇ ಕ್ಷೇತ್ರದ ಬಗ್ಗೆಯೂ ಅರಿವಿಲ್ಲ. ಸಾಧಾರಣವಾಗಿ ಎಲ್ಲ ಪ್ರಶ್ನೆಗಳ ಅವರ ಉತ್ತರ ಊಹೆಯೇ. ಕೆಲವರಂತೂ ಸೊನ್ನೆ ಗುಣಾಂಕ ತೆಗೆದುಕೊಳ್ಳುತ್ತಾರೆ. ಶಿಕ್ಷಕರೆನಿಸಿಕೊಳ್ಳುವ ಅಭ್ಯರ್ಥಿಗಳ ಗುಣಮಟ್ಟವೂ ಸಾಧಾರಣವೇ. ಸಾಧಾರಣವಾಗಿ ಸರಳ ಲೆಕ್ಕವನ್ನು ಕೂಡ ಮಾಡುವುದಿಲ್ಲ. ಒಂದೆರೆಡು ಸಲ ಭಾಗಿಸುವ ಲೆಕ್ಕವನ್ನು ತಪ್ಪಾಗಿ ಕೊಟ್ಟಿದ್ದಾರೆ. ನಿರೂಪಕರಲ್ಲೂ ಮುಂಚಿನ ಉತ್ಸಾಹ ಕಾಣುವುದಿಲ್ಲ.

—ರೇಖಾ ಜೋಷಿ, ಬೆಂಗಳೂರು

## ಮೂರ್ಖತನದ ಪರಮಾವಧಿ

ರಾಧಾ ರಾಮಣದಲ್ಲಿ ತಂದೆ ದಿನಕರ್, ರುದ್ರನನ್ನು ನೀರಿಗೆ ತಳ್ಳಿ ನಿಜವಾದ ಅವನಿ ಜೊತೆ ಓಡುತ್ತಾನೆ. ಅಲ್ಲಿಂದ ಅವನ ಮೂರ್ಖತನ ಆರಂಭವಾಗುತ್ತದೆ. ಅಲ್ಲಿಂದ ಓಡಿದ ರುದ್ರ ತನ್ನನ್ನು ಹಿಂಬಾಲಿಸಿಕೊಂಡು ಬರಬಹುದು ಎಂಬ ಕಲ್ಪನೆಯು ಇಲ್ಲದೆ ನಕಲಿ ಅವನಿಗೆ ನಿಜ ತಿಳಿಸಿ ಅವಳನ್ನು ನಿಲ್ಲಿಸಿಕೊಂಡು ಪುರಾಣ ಶುರು ಮಾಡುತ್ತಾನೆ ನಕಲಿ ಅವನಿ ಬಗ್ಗೆ ತಿಳಿಸಿರುತ್ತಾಳೆ, ಅವಳು ಸಹ ತನ್ನ ಚಾಣಾಕ್ಷತೆ ತೋರಿಸದೆ ದಡಿಯಂತೆ ವರ್ತಿಸುತ್ತಾಳೆ.

ಧಾರಾವಾಹಿ ಆರಂಭದಿಂದ ಏನೊಂದು ಸಾಧಿಸದೇ ಪ್ರಾಣಬಿಟ್ಟರೆ ಅದಕ್ಕಿಂತ ಮೂರ್ಖತನ ಬೇರಿಲ್ಲ. ನಿಜಕ್ಕೂ ಧಾರಾವಾಹಿ ನೋಡುತ್ತಿದ್ದರೆ ವಾಕರಿಕೆ ಬರುತ್ತದೆ.ಏನೊಂದು ಉಪ್ಪುಹುಳಿ, ಕಾರವಿಲ್ಲದ ಈ ದರಿದ್ರ ಧಾರಾವಾಹಿ ಯಾವಾಗ ಮುಗಿಯುತ್ತದೋ ಸ್ವತಃ ನಿರ್ದೇಶಕನಿಗೂ ತಿಳಿದಿಲ್ಲ ಎಂದು ಕಾಣುತ್ತದೆ.

—ಎನ್.ಎಸ್. ಚಂದ್ರಶೇರ್ ಬೆಂಗಳೂರು.

## ಸೊಗಸಾದ ಕಾರ್ಯಕ್ರಮ



ಕಲಾತ್ಮಕ ಚಿತ್ರಗಳನ್ನು ನಿರ್ಮಿಸಿ, ಅನೇಕ ಪ್ರಶಸ್ತಿಗಳನ್ನು ಪಡೆದು ಕನ್ನಡ ಚಲನಚಿತ್ರ ಪ್ರಪಂಚಕ್ಕೆ ಒಂದು ಘನತೆಯನ್ನು ತಂದು ಕೊಟ್ಟ ಗಿರೀಶ ಕಾಸರವಳ್ಳಿ ಅವರ ಸಂದರ್ಶನವನ್ನು ಚಂದನವಾಹಿನಿಯಲ್ಲಿ ಪ್ರಸಾರ ಮಾಡಲಾಯಿತು. ಅವರು ನಿರ್ಮಿಸಿದ ಒಂದೊಂದು ಚಿತ್ರಗಳ ಹಿಂದೆ ಅವರು ಸಮಾಜಕ್ಕೆ ಹೇಳಬೇಕಾದ ಸಂಗತಿಗಳ ಮತ್ತು ಕಥೆಗಾರರ ಮೂಲ ಉದ್ದೇಶವನ್ನು ದೃಶ್ಯದಲ್ಲಿ ಸೆರೆ ಹಿಡಿಯುವ ಹಿಂದಿನ ತುಡಿತವನ್ನು ಬಹಳ ಸುಂದರವಾಗಿ ನಿರೂಪಿಸಿದರು. ಅವರ ಒಂದೊಂದು ಚಿತ್ರಗಳಿಗೆ ನೀಡಿದ ವಿವರ ಮತ್ತು ನಿರ್ದೇಶಕನಿಗೆ ಇರಬೇಕಾದ ಸಾಮಾಜಿಕ ಕಳಕಳಿಯನ್ನು ಎತ್ತಿ ತೋರಿಸುತ್ತಿತ್ತು. ಅವರು ಹುಟ್ಟಿದ್ದು ತೀರ್ಥಹಳ್ಳಿಯ ಸಮೀಪದ ಗ್ರಾಮ ಕೆಸೂರು. ಪ್ರಾಥಮಿಕ ಶಿಕ್ಷಣವನ್ನು ಕಮರಡಿ ಮತ್ತು ಕೆಸೂರನಲ್ಲಿ ಮುಗಿಸಿದರು. ಅವರ ಚಿಕ್ಕಪ್ಪನವರಾದ ನೀನಾಸಂನ ಕೆ.ವಿ. ಸುಬ್ಬಣ್ಣ ಇವರ ಸಂಪರ್ಕಕ್ಕೆ ಬಂದು ಸಿನಿಮಾ ಲೋಕಕ್ಕೆ ಪಾದಾರ್ಪಣೆ ಮಾಡಲು ಸಹಾಯವಾಯಿತು ಎಂಬುದನ್ನು ನೆನಸಿಕೊಂಡರು.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಮುಗಿಯದ ಸಾಕ್ಷಿ

ಕಲರ್ಸ್‌ನ 'ಅಗ್ನಿಸಾಕ್ಷಿ'ಯಲ್ಲಿ ಚಂದ್ರಿಕಾ ಹಾಗೂ ಕೌಶಿಕನ ಬಣ್ಣ ಬಯಲಾಯಿತೆಂದು ವೀಕ್ಷಕರು ನಿರಾಳವಾಗುವಂತಿಲ್ಲ. ಅವರು ಸಿಕ್ಕರೂ ಸನ್ನಿಧಿಯ ಸಮಸ್ಯೆಗಳು ಮುಗಿಯುವುದಿಲ್ಲವೆಂದು ಸ್ವಾಮೀಜಿಯವರು ಅಪ್ಪಣೆ ಕೊಟ್ಟಿದ್ದಾರೆ.

'ಲಕ್ಷ್ಮೀಬಾರಮ್ಮ'ದಲ್ಲಿ ಮನೆಯಲ್ಲಿದ್ದ ಖಳರು ಮರೆಯಾದರೂ ಹೊಸ ಖಳರೊಡನೆ ಮುಂದುವರಿಯುತ್ತಿರುವಂತೆ ಅಗ್ನಿಸಾಕ್ಷಿ ಕೂಡ ಹೊಸ ಖಳರೊಡನೆ ಮುನ್ನಡೆಯುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ಆದ್ದರಿಂದ ವೀಕ್ಷಕರೇ ಅಗ್ನಿಸಾಕ್ಷಿ ಮುಗಿಯುವುದೆಂಬ ಸುಳ್ಳು ಭರವಸೆ ಇಟ್ಟು ನಿರಾಳವಾಗ ಬೇಡಿ. ನಿಮಗಿನ್ನೂ ತಾಳ್ಮೆ ಇದ್ದರೆ ಅಗ್ನಿಸಾಕ್ಷಿ ಯ ಹೊಸತಿರುವುಗಳಿಗೆ ಸಿದ್ಧವಾಗಿ. ಇಲ್ಲ ಟಿವಿ ಬಂದುಮಾಡಿ ನಿರಾಳವಾಗಿ.

—ಗೀತಾ ನೆಲ್ಲೀಕಾಯಿ

## ಅಭಿಮಾನವೇ ಅಂತಿಮ ತೀರ್ಪೇ?

ಝೀ ಕನ್ನಡ ವಾಹಿನಿಯ ಜನಪ್ರಿಯ ಮನರಂಜನಾ ಕಾರ್ಯಕ್ರಮ ಸರಿಗಮಪ ಸೀಸನ್– 15 ಇಪ್ಪತ್ತು ವಾರಗಳವರೆಗೂ ಜನರ ಮನರಂಜಿಸಿದ್ದು ತುಂಬಾ ಸಂತೋಷ. ತೀರ್ಪುಗಾರರಾದ ವಿಜಯ ಪ್ರಕಾಶ್, ಅರ್ಜುನ್ ಜನ್ಯ, ರಾಜೇಶ್ ಕೃಷ್ಣನ್ ಅವರು ಹಾಗೂ ಮಹಾಗುರುಗಳಾದ ಹಂಸಲೇಖ ಅವರುಗಳು ಕಾಲ ಕಾಲಕ್ಕೆ ಸ್ಪರ್ಧಿಗಳ ಸಾಧನೆ ಮುಂದಿನ ಹಂತಗಳಲ್ಲಿ ಅನುಸರಿಸಬೇಕಾದ ಅಂಶಗಳ ಬಗ್ಗೆ ತಮ್ಮ ನೇರ ನುಡಿಯಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಎಂದಿನಂತೆ ನಿರೂಪಕಿ ಮಾತಿನಮಲ್ಲಿ ಅನುಶ್ರೀ ತಮ್ಮ ಮಾತಿನಲ್ಲಿ ಎಲ್ಲರನ್ನೂ ರಂಜಿಸಿದ್ದಾರೆ. ಎಲ್ಲವೂ ಸರಿ, ಆದರೆ ಅಂತಿಮ ಹಂತ ತಲುಪುತ್ತಿದ್ದಂತೆ ತಮ್ಮ ಕೈಚೆಲ್ಲಿ ಅಭಿಮಾನಿಗಳ ಎಸ್‌ಎಂಎಸ್‌ಗಳನ್ನು ಆಧರಿಸಿ ಅಂತಿಮ ಆಯ್ಕೆ ಮಾಡಿದ್ದಾರೆ. ಎಸ್‌ಎಂಎಸ್ ಗಳ ಬಗ್ಗೆ ಪಾರದರ್ಶಕತೆ ಇಲ್ಲ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಮಾತು ತಪ್ಪಿದಂತೆ

ಜಾನಕಿ ಮುಗ್ಧೆ, ಸುಗುಣಿ, ನೇರ ಸ್ವಭಾವದವಳು ಎಲ್ಲಾ ಸರಿ. ಆದರೆ ಅವಳ ಬಾಯಲ್ಲಿ ಯಾವುದೇ ಗುಟ್ಟು ನಿಲ್ಲುವುದೇ ಇಲ್ಲವಲ್ಲಾ! ಹಿಂದೆ ನಿರಂಜನನ ಕೇಸ್ ಬಿದ್ದು ಹೋದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿ ಆನಂದ 'ಇದು ಕಾನ್ಫಿಡೆನ್ಷನಲ್ ಯಾರಿಗೂ ಈಗಲೇ ಹೇಳಬೇಡಿ' ಎಂದು ಜಾನಕಿಗೆ ಹೇಳಿದ್ದರೂ ಅವಳು ಕೇಸ್‌ನ ಪ್ರಾಮುಖ್ಯತೆಯ ಬಗ್ಗೆ ಸ್ವಲ್ಪವೂ ಚಿಂತಿಸದೆ ತಕ್ಷಣವೇ ನಿರಂಜನನಿಗೆ ಹೇಳಿ ಬಿಡುತ್ತಾಳೆ. ಈಗ ಸಿ.ಎಸ್.ಪಿ. ಜಾನಕಿಗೆ ಕಷ್ಟದ ಸಮಯದಲ್ಲಿ 10 ಲಕ್ಷ ರೂ.ಗಳನ್ನು ಕೊಡುವುದಾಗಿ ಒಪ್ಪಿರುವ ವಿಷಯವನ್ನು ಯಾರಿಗೂ ಹೇಳಬೇಡಿ ಎಂದು ಹೇಳಿದರೆ ಮರುಕ್ಷಣವೇ ಶ್ಯಾಮಲತ್ತೆಗೆ ಎಲ್ಲಾ ವಿವರ ಒಪ್ಪಿಸುತ್ತಾಳೆ. ಹೀಗೇಕೆ? ಶ್ಯಾಮಲತ್ತೆಯ ಸೋದರ ಸೊಸೆ ಆದ್ದರಿಂದ ಸಹಜ ರಕ್ತ ಗುಣ ಇರಬಹುದು ಎನ್ನೋಣವೇ?

– ಮೀರಾ ಮೋಹನ್